**ಅ. ದಾ. ಸಂ. 367/2017**

**ಡಿ.ಡಬ್ಲೂ - 01**

**ದಿನಾಂಕ: 03-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃ-ವಾದಿಯ ಪರ ಶ್ರೀ. ಎಸ್. ಜಿ. ವಿ, ವಕೀಲರಿಂದ:-**

04. ದಾವಾಸ್ವತ್ತಿನ ವಿಸ್ತೀರ್ಣ ಒಂಬತ್ತುವರೆ ಗುಂಟೆ ಇದೆ. ದಾವಾಸ್ವತ್ತಿನ ಪೂರ್ವಕ್ಕೆ ಹಳ್ಳ ಮತ್ತು ಉತ್ತರಕ್ಕೆ ಬೋರಯ್ಯನವರ ಸ್ವತ್ತು ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಾವಾಸ್ವತ್ತಿನ ಪಶ್ಚಿಮಕ್ಕೆ ನಿಮಗೆ ಸೇರಿದ ಸ್ವತ್ತು ಮತ್ತು ದಕ್ಷಿಣಕ್ಕೆ ವಾದಿಯ ಸ್ವತ್ತು ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿ.17-04-1974 ರಂದು ನಿಪಿ-1ರಂತೆ ನಿಮ್ಮ ತಾಯಿಯಾದ 1ನೇ ಪ್ರತಿವಾದಿಯು ಮೃತ ವಾದಿಯ ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾದಪತ್ರದಲ್ಲಿ ಇರುವ ವಿಷಯದ ಬಗ್ಗೆ ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಪತ್ರದಲ್ಲಿ ಇರುವ ವಿಷಯದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ಓದಿ ತಿಳಿದುಕೊಂಡಿರುವುದಿಲ್ಲ.

05. ದಾವಾಸ್ವತ್ತನ್ನು ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನಾನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲನೆ ಮಾಡಿರುತ್ತೇನೆ. ಪರಿಶೀಲನೆ ಮಾಡಿದ್ದಾಗ ದಾವಾಸ್ವತ್ತನ್ನು ಯಾರಿಗೂ ಸಹ ಮಾರಾಟ ಮಾಡಿರುವುದಿಲ್ಲ ಎಂದು ನನಗೆ ಗೊತ್ತಾಯಿತು. ನಾನು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಋಣಭಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈಗ ಸಾಕ್ಷಿಗೆ ನಿಡಿ-4 ನ್ನು ತೋರಿಸಿದ್ದು, ಅದರಲ್ಲಿ 1ನೇ ಪ್ರತಿವಾದಿಯು ನಿಪಿ-1ರಂತೆ ಮೃತ ವಾದಿಗೆ ದಾವಾಸ್ವತ್ತನ್ನು ಮಾರಾಟ ಮಾಡಿರುವ ಬಗ್ಗೆ

ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಡಿ-4ನ್ನು ನಾನು ಸುಮಾರು 10 ವರ್ಷಗಳ ಹಿಂದೆ ಪಡೆದುಕೊಂಡಿರುತ್ತೇನೆ. ನಿಡಿ-4ನ್ನು ನೀವು ಪಡೆದುಕೊಳ್ಳುವ ಸಮಯದಲ್ಲಿ ನಿಮಗೆ ನಿಪಿ-1ರ ಬಗ್ಗೆ ಗೊತ್ತಾಯಿತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ನ್ನು ನೀವು ಇಲ್ಲಿಯವರೆಗೂ ನ್ಯಾಯಾಲಯ ಅಥವಾ ಸಂಬಂಧ ಪಟ್ಟ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿರುತ್ತೇನೆ. ನಿಪಿ-1 ಸರಿಯಾಗಿರುವ ಕಾರಣದಿಂದ ನೀವು ಅದನ್ನು ಇಲ್ಲಿಯವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರಂತೆ 1ನೇ ಪ್ರತಿವಾದಿಯು ದಾವಾಸ್ವತ್ತನ್ನು ಮೃತ ವಾದಿಗೆ ಮಾರಾಟ ಮಾಡಿದ ನಂತರ 1ನೇ ಪ್ರತಿವಾದಿಗೆ ದಾವಾಸ್ವತ್ತಿನ ಮೇಲೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

06. ದಾವಾಸ್ವತ್ತನ್ನು 1ನೇ ಪ್ರತಿವಾದಿಯ ತಂದೆಯಾದ ಸುಬ್ಬಯ್ಯನವರು 1ನೇ ಪ್ರತಿವಾದಿಗೆ ನೀಡಿರುತ್ತಾರೆ. ನಿಡಿ-1ರಂತೆ ದಿ.10-07-1970 ರಂದು 1ನೇ ಪ್ರತಿವಾದಿಯು ಹನುಮಂತಯ್ಯನವರಿಂದ ಸರ್ವೆ ನಂ. 81/4ರಲ್ಲಿ 18 1/4 ಗುಂಟೆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಡಿ-1ರಂತೆ ಸದರಿ ಸ್ವತ್ತು ನಿಮ್ಮ ತಾಯಿಯವರ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಡಿ-4ರಲ್ಲಿ ನಿಡಿ-1ರ ಕ್ರಯಪತ್ರದ ಬಗ್ಗೆ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಡಿ-1ರ ಆಧಾರದ ಮೇಲೆ 1ನೇ ಪ್ರತಿವಾದಿಯ ಹೆಸರಿಗೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಮತ್ತು ಮ್ಯುಟೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಡಿ-1ರ ಆಧಾರದ ಮೇಲೆ 1ನೇ ಪ್ರತಿವಾದಿಯು ಸದರಿ ಸ್ವತ್ತಿನ ಮಾಲೀಕರಾಗಿ ನಿಪಿ-1ರಂತೆ ದಾವಾಸ್ವತ್ತನ್ನು ಮೃತ ವಾದಿಗೆ ಮಾರಾಟ

ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರ ಬಗ್ಗೆ ನಿಮಗೂ ಮತ್ತು ಇತರೇ ಪ್ರತಿವಾದಿಗಳಿಗೂ ಮಾಹಿತಿ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ನ್ನು ಮಾಡಿದ ದಿನದಿಂದ ಎಲ್ಲಾ ಪ್ರತಿವಾದಿಗಳಿಗೂ ದಾವಾಸ್ವತ್ತಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

07. ಯಾವ ದಿನಾಂಕದಂದು 1ನೇ ಪ್ರತಿವಾದಿಯು 2 ರಿಂದ 4ನೇ ಪ್ರತಿವಾದಿಗಳ ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ದಾನಪತ್ರವನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 18-03-2016 ರಂದು ನಿಡಿ-10 ಮತ್ತು 11ರಂತೆ ಆಗಿರುವ ದಾನಪತ್ರಗಳಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಡಿ-10 ಮತ್ತು 11ರಲ್ಲಿ ನಮೂದಿಸಿರುವ ಸ್ವತ್ತಿನ ಬಗ್ಗೆ ನನಗೆ ಗೊತ್ತು. ನಿಡಿ-10 ಮತ್ತು 11 ನ್ನು ಸರ್ವೆ ನಂ. 81/4ರಲ್ಲಿ ಇರುವ 8 ಗುಂಟೆ ಜಮೀನಿಗೆ ಮಾಡಲಾಗಿದೆ. ನಿಡಿ-10ರ ಸ್ವತ್ತಿನ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ರೇಣುಕಮ್ಮನವರ ಜಮೀನು, ಉತ್ತರಕ್ಕೆ ಬೋರಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ಯಶೋಧಮ್ಮನವರ ಜಮೀನು ಇದೆ. ನಿಡಿ-11ರ ಸ್ವತ್ತಿನ ಪೂರ್ವಕ್ಕೆ ಗೌರಮ್ಮನವರ ಜಮೀನು, ಪಶ್ಚಿಮಕ್ಕೆ ನನಗೆ ಸೇರಿದ ಜಮೀನು, ಉತ್ತರಕ್ಕೆ ನನಗೆ ಸೇರಿದ ಸ್ವತ್ತು ಮತ್ತು ದಕ್ಷಿಣಕ್ಕೆ ಚಿಕ್ಕರೇವಣ್ಣನವರ ಸ್ವತ್ತು ಇದೆ. ನಿಡಿ-10 ಮತ್ತು 11 ನ್ನು ಮಾಡುವ ಎಷ್ಟೋ ವರ್ಷಗಳ ಮುಂಚೇ 1ನೇ ಪ್ರತಿವಾದಿಯು ಮೃತ ವಾದಿಯ ಹೆಸರಿಗೆ ನಿಪಿ-1ರಂತೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತು ಮತ್ತು ನಿಡಿ-10 ಮತ್ತು 11ರಲ್ಲಿ ನಮೂದಿಸಿರುವ ಸ್ವತ್ತುಗಳಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರ ಬಗ್ಗೆ ಎಲ್ಲಾ

ಪ್ರತಿವಾದಿಗಳಿಗೆ ಮಾಹಿತಿ ಇದ್ದರೂ ಸಹ ಮೃತ ವಾದಿ ಮತ್ತು ಅವರ ಕುಟುಂಬಕ್ಕೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಎಲ್ಲಾ ಪ್ರತಿವಾದಿಗಳು ಶಾಮೀಲಾಗಿ ನಿಡಿ-10 ಮತ್ತು 11 ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಡಿ-10 ಮತ್ತು 11ರ ಆಧಾರದ ಮೇಲೆ 2 ರಿಂದ 4ನೇ ಪ್ರತಿವಾದಿಗಳಿಗೆ ದಾವಾಸ್ವತ್ತಿನ ಮೇಲೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ನ್ನು ಮಾಡಿದ ನಂತರ ನಿಡಿ-10 ಮತ್ತು 11 ನ್ನು ಮಾಡಿರುವ ಕಾರಣದಿಂದ ನಿಡಿ-10 ಮತ್ತು 11 ಕಾನೂನುಬದ್ದವಾದ ದಾಖಲೆ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸೃಷ್ಟಿತ ನಿಡಿ-10 ಮತ್ತು 11ರ ಆಧಾರದ ಮೇಲೆ ನೀವು ವಾದಿಯ ಸ್ವಾಧೀನಕ್ಕೆ ತೊಂದರೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೆ ದಾವಾಸ್ವತ್ತಿನ ಮೇಲೆ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರತಿವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**